ಯಾವುದೇ ಒಂದು ಪ್ರಶ್ನೆ ಬಂದರೂ ಕೂಡ ಅವರೇ ಉತ್ತರಗಳನ್ನು ಕೊಡತಕ್ಕ ಸಂದರ್ಭವನ್ನು ನಾನು ನೋಡಿದ್ದೇನೆ. ಆದುದರಿಂದ ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಈ ಸಕ್ಕರೆ, ಸೀಮೆ ಎಣ್ಣೆ ವಿತರಣೆ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ನಾಳೆ ಈ ಸದನಕ್ಕೆ ತಿಳಿಸ ಬೇಕು : ಎಂದು.

ಶ್ರೀ ಪಂಪಾಪತಿ.—ಸ್ವಾಮಿ, ಈ ಅಗತ್ಯವಸ್ತುಗಳಿಗೆ ಪೆಚ್ಚು ಬೆಲೆ ಕೊಟ್ಟರೆ ಎಷ್ಟುಬೇಕಾದರೂ ಸಿಕ್ಕುತ್ತವೆ. ಆದರೆ ಕಡಿಮೆ ಬೆಲೆಗೆ ಮಾತ್ರ ಸಿಕ್ಕುವುದಿಲ್ಲ. ೧ ಕೆ.ಜಿ. ಸಕ್ಕರೆಗೆ ೧೦—೦೦ ರೂ, ನಂತೆ ಕೊಟ್ಟರೆ ತಮಗೆ ಎಷ್ಟು ಸಾವಿರ ಚೀಲ ಬೇಕಾದರೂ ಸಿಕ್ಕುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಈ ಸಂದರ್ಭದಲ್ಲಿ ಮಾನ್ಯ ಆಹಾರ ಮತ್ತು ನಾಗರೀಕ ಖಾತೆ ಸಚಿವರು ಸದನದಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರಿಂದ ನಾವು ಸಮರ್ಪಕವಾದ ಉತ್ತರವನ್ನು ಕೇಳಿ ಪಡೆಯಬಹುದಾಗಿತ್ತು. ಆದರೆ ಅವರು ಇಲ್ಲಿಲ್ಲ. ಈ ವಿಚಾರವನ್ನು ನಾವು ಇಲ್ಲಿ ಪದೇ ಪದೇ ಹೇಳು ತ್ತಲೇ ಇದ್ದೇವೆ. ಸಾಮಾನ್ಯವಾಗಿ ಸಚಿವರುಗಳು ಸದನಕ್ಕೆ ಬಾರದೆ ನಿಲ್ಲುವುದು ಇದೊಂದು ಖಾಯಲೆ ಯಾಗಿದೆ. ಇದಕ್ಕೆ ನಾವು ಎಲ್ಲೀಂದ, ಯಾವ ಮದ್ದನ್ನು ತರಬೇಕೆಂಬುದನ್ನು ತಾವೇ ಹೇಳಬೇಕು. ನೀವು ವಿರೋಧಪಕ್ಷದವರು ಏನೂ ಬೇಕಾದರೂ ಮಾಡಿಕೊಳ್ಳಿ, ನಿಮ್ಮ ಸಹಕಾರ ನಮಗೆ ಬೇಕಾಗಿಲ್ಲ, ಎಂದು ಬಾಯಲ್ಲಿ ಹೇಳುವ ಬದಲು ಕಾರ್ಯದಲ್ಲಿ ಮಾಡಿ ತೋರಿಸುತ್ತಿದ್ದಾರೆ ಇದನ್ನು ನಾವು ಸರ್ಕಾರಕ್ಕೆ ಅನೇಕ ಸಾರಿ ಹೇಳಿದ್ದೇವೆ; ತಾವೂ ಕೂಡ ಅವರಿಗೆ ಎಚ್ಚರಿಕೆ ಕೊಟ್ಟಿದ್ದೀರಿ. ಆದರೂ ಆದರಿಂದ ಯಾವ ಪ್ರಯೋಜನವೂ ಆಗಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಸ್ವಾಮಿ, ಆಗಲೇ ಮಾನ್ಯ ಸಚಿವರಾದ ಶ್ರೀಮಾನ್ ಜಿ. ಬಿ. ಶಂಕರರಾವ್ ರವರನ್ನು ಒಂದು ಪ್ರಶ್ನೆ ಕೇಳಿದಾಗ ಅವರು ಫೈಲು ಇಲ್ಲವೆಂದು ಹೇಳಿದರು. ಆಗ ತಾವು ಏನು ಹೇಳಿದಿರಿ ಅಂದರೆ ಅವರು ಇನ್ನೂ ನಿನ್ನೆತಾನೇ ಅಧಿಕಾರ ವಹಿಸಿಕೊಂಡಿದ್ದಾರೆ, ಫೈಲುಗಳನ್ನು ಸರಿಯಾಗಿ ನೋಡಿಲ್ಲ, ಆದ್ದರಿಂದ ಅವರಿಗೆ ಸ್ವಲ್ಪ ಕಾಲಾವಕಾಶ ಕೊಟ್ಟು ಸಹಕರಿಸಬೇಕೆಂದು ಹೇಳಿದಿರಿ. ಆದರೆ ಈಗ ತಾವು ಮಾನ್ಯ ಪಂಪಾಪತಿಯವರನ್ನು ''ಈ ರೀತಿ ಬಾಯಿ ಬಡಿದುಕೊಳ್ಳಬೇಡಿ'' ಎಂದು ಹೇಳುವುದು ಸರಿಯಿ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಕಂದಾಯ ಸಚಿವರು ಈ ಬೆಲೆ ಏರಿಕೆ ಬಗ್ಗೆ ತಮ್ಮ ಅನುಕಂಪ ವನ್ನು ಸೂಚಿಸಿದ್ದಾರೆ. ಕೆಲವುಕಡೆ ಸಕ್ಕರೆ ೮ –೦೦ ರೂ. ವರೆಗೂ ಮಾರಾಟವಾಗಿದೆ ಎಂಬುದನ್ನು ಅವರು ನಮಗೆ ಹೇಳಬೇಕಾಗಿಲ್ಲ. ಆದರೆ ಇವು ಜನತೆಗೆ ಸರಿಯಾಗಿ ನ್ಯಾಯಬೆಲೆಗೆ ಸಿಕ್ಕುವಂತೆ ಮಾಡಲು ಏನು ಕ್ರಮ ಕೈಗೊಂಡಿದ್ದಾರೆಂಬುದು ನಮಗೆ ಬೇಕಾಗಿರತಕ್ಕ ಅಂಶ. ನಾನು ಈ ಪಾತನ್ನು ವಿತಕ್ಕೆ ಹೇಳುತ್ತಿದ್ದೇನೆಂದರೆ ಮೊನ್ನೆ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜನತೆಗೆ ಅಶ್ವಾಸನೆಯನ್ನು ಕೊಡುತ್ತಾ ಸಕ್ಕರೆ ಬೆಲೆ, ಸೀಮೆ ಎಣ್ಣೆ ಬೆಲೆಗಳನ್ನು ಇಳಿಸುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದು ಕುಳಿತಿದ್ದಾರೆ. ಆದರೆ ಅವರ ಆಶ್ವಾಸನೆಯಂತೆ ಬೆಲೆಗಳನ್ನು ಏತಕ್ಕೆ ಇಳಿಸಲಿಲ್ಲವೆಂದು ಹೇಳಬೇಕಾಗು ತ್ತದೆ.

Felling of trees in Malnad Forests.

ಶ್ರೀ ಕೆ. ದಿವಾಕರ್.—ಸ್ವಾಮಿ; ತಮಗೆ ನಾನು ಒಂದು ನೋಟೀಸನ್ನು ಕಳುಹಿಸಿದ್ದೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಕಟ್ಟಿಗೆ ಕಡಿಯುವುದಕ್ಕೆ ಈಗ ಲೈಸೆನ್ಸ್ ಕೊಡುತ್ತಿಲ್ಲ. ಇನ್ನು ಮಳೆಗಾಲ ಪ್ರಾರಂಭವಾದಮೇಲೆ ಕಟ್ಟಿಗೆ ಕಡಿಯುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಇತ್ತೀಚೆಗೆ ಮಾನ್ಯ ಮುಖ್ಯಿ ಮಂತ್ರಿಯವರೂ ಮತ್ತು ಮಾನ್ಯ ಸಚಿವರಾದ ಕೆ. ಯಂಕಟಪ್ಪನವರೂ ನಮ್ಮ ಕಡೆಗೆ ಬಂದಾಗ ಸಾವಿರಾರು ಜನ ನಾಗರೀಕರು ಬಂದು ಮನವಿಗಳನ್ನು ಕೊಟ್ಟು ತಮ್ಮ ಕಷ್ಟಗಳನ್ನು ಹೇಳಿ ಕೊಂಡಿದ್ದಾರೆ. ಆದರೂ ಅವರು ಇದನ್ನು ಗಣನೆಗೆ ತೆಗೆದುಕೊಂಡಿಲ್ಲ, ಈಗ ಹಿಂದೆ ೫ ರೂ. ಕೊಟ್ಟು ಲೈಸೆನ್ಸ್ ತೆಗೆದು ಕೊಂಡು ಕಟ್ಟಿಗೆ ಕಡಿಯುತ್ತಿದ್ದರು. ಆದರೆ ಸರ್ಕಾರದವರು ಈಗ ಬೇಕಾದಷ್ಟು ಡಿಪೋಗಳನ್ನು ತೆರೆದಿರು ವುದರಿಂದ ಅಲ್ಲಿ ಹೋಗಿ ಕಟ್ಟಿಗೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಆ ಡಿಪೋಗಳು ಎಲ್ಲಿವೆ ಎಂಬುದೇ ಗೊತ್ತಾಗುತ್ತಿಲ್ಲ. ಅಲ್ಲಿಯ ಜನರು ನನಗೆ ಪ್ರತಿದಿನ ಏನು ಕಾಗದ ಬರೆಯುತ್ತಿದ್ದಾರೆ ಎಂದರೆ ನೀವು ಇನ್ನೊಂದು ಸಾರಿ ನಮ್ಮ ಕಡೆ ಬಂದರೆ ನಿಮ್ಮನ್ನೂ ಮತ್ತು ನಿಮ್ಮ ಮುಖ್ಯಿ ಮಂತ್ರಿಯವರನ್ನೂ

ಘೇರಾವ್ ಮಾಡುತ್ತೇವೆ ಎಂದು. ಅಲ್ಲದೆ ನಾವು ಇಷ್ಟು ಕಾಗದ ಬರೆದರೂ ಯಾವುದೇ ಪ್ರಯೋಜನವೂ ಆಗದಿರುವುದರಿಂದ ನೀವು ಬದುಕಿದ್ದೀರೋ ಅಥವಾ ಸತ್ತಿದ್ದಿರೋ ಎಂದು ಕೂಡ ಕಾಗದದಲ್ಲಿ ಬರೆಯುತ್ತಿದ್ದಾರೆ.

ಆದುದರಿಂದ ನಾನು ಈ ಸದನದ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಇನ್ನು ೨—೩ ದಿವಸಗಳೊಳಗಾಗಿ ಒಂದು ತೀರ್ಮಾನವನ್ನು ತೆಗೆದುಕೊಂಡು ಹಿಂದೆ ಇದ್ದ ರೀತಿಯಲ್ಲಿ ಜನರಿಗೆ ಲೈಸೆನ್ಸ್ ಕೊಟ್ಟು ಕಟ್ಟಿಗೆ ಕಡಿಯುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ದಾವಣಗೆರೆ ಬಯಲು ಪ್ರದೇಶವೆನ್ನುವುದು ಸರ್ವರಿಗೂ ತಿಳಿದ ವಿಷಯವಾಗಿರುತ್ತೆ. ಅಲ್ಲಿ ಕಟ್ಟಿಗೆಗೆ ಎಷ್ಟು ಅಭಾವವಿರುತ್ತದೆಂಬದು ತಮಗೆಲ್ಲ ತಿಳಿದಿರುವ ವಿಚಾರವಾಗಿರುತ್ತದೆ. ದಾವಣಗೆರೆ ಸಿಟಿಗೆ ಸಾಕಷ್ಟು ಕಟ್ಟಿಗೆ ಬರುತ್ತಿಲ್ಲ. ಸರ್ಕಾರಿ ಡಿಪೊ ವ್ಯವಸ್ಥೆ ಇದ್ದರೂ ಕೂಡ ಅಲ್ಲಿಗೆ ಕಟ್ಟಿಗೆ ಬರುತ್ತಿಲ್ಲ; ಈ ಎಲ್ಲ ಕಾರಣದಿಂದ ಅಲ್ಲಿಯ ಜನರ ಸ್ಥಿತಿಗತಿ ಬಹಳ ಕಷ್ಟವಾಗಿರುತ್ತದೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ವಿಚಾರ ಮಾಡಿ ದಾವಣಗೆರೆ ಸರಿಯಾದರೀತಿಯಲ್ಲಿ ಕಟ್ಟಿಗೆಯ ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಯಬಯಸುತ್ತೇನೆ.

ಅಧ್ಯಕ್ಷರು.—ಸೀಮೆಎಣ್ಣೆ ವಿಚಾರ, ಸಕ್ಕರೆಯ ವಿಚಾರ. This matter was raised on the very first day of the current Session. The Chief Minister replied to the questions. Discussions were held. If anything further is to be said, the Government may make a statement on the points raised by the hon. Members.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಗಳೇ ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ನಡೆದಿದೆ. ಮಾನ್ಯ ಸದಸ್ಯರನೇಕರು ಇದರ ಪೂರೈಕೆ ಬಗ್ಗೆಯೂ ಮತ್ತು ಆದರ ಕಂಡೀಷನ್ ಬಗ್ಗೆಯೂ ಕೂಡಿ ಪ್ರಸ್ತಾಪ ಮಾಡಿರುತ್ತಾರೆ. ಸೀಮೆ ಎಣ್ಣೆ ಮತ್ತು ಸಕ್ಕರೆಯ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿರತಕ್ಕಂಥಾದ್ದು ಈ ಸದನಕ್ಕೆ ಗೊತ್ತಿರುತ್ತದೆ. ಅವರು ಹೇಳಿಕೆಯನ್ನು ಕೊಡುವುದಕ್ಕೆ ಮೊದಲಿನ ಸ್ಥಿತಿ ಮತ್ತು ಕೊಟ್ಟನಂತರ ಆಗಿರತಕ್ಕಂಥ ಸ್ಥಿತಿ, ಈ ಮಧ್ಯೆ ಆಗಿರತಕ್ಕಂಥ ಬದಲಾವಣೆಗಳ ಬಗ್ಗೆ ಸರ್ಕಾರದವರು ಕೈಗೊಂಡಿರತಕ್ಕಂಥ ವಿಚಾರದ ಮೇಲೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು, ಈ ಎಲ್ಲ ವಿವರಗಳನ್ನು ಒಳಗೊಂಡಂತೆ ಪೂರ್ಣವಾಗಿ ವಿವರಗಳನ್ನು ಸರ್ಕಾರದ ಪರವಾಗಿ ನಾಳೆಯದಿವಸ ಕೊಡುತ್ತೇನೆಂದು ಹೇಳುತ್ತೇನೆ.

MESSAGE

MR. SPEAKAR.—I have received the following message from the Chairman, Legislative Council.

"As required under Rule 106 of the Rules of Procedure and Conduct of Business of the Karnataka Legislative Council I send herewith the following Bills which have been agreed to by the Legislative Council, without amendments on 29th February, 1980."

Names of the Bills:—

(1) The Karnataka Command Areas Development Bill, 1980.

(2) The Karnataka Land Reforms (Amendment) Bill, 1980.

(3) The Mysore Religious & Charitable Institutions (Karnataka Amendment) Bill, 1979, and

(4) The Karnataka Appropriation Bill, 1980.